# ಸೋನು ರೋಡ್ ಟ್ರಿಪ್!



“ಏನೋ ಪುಟ್ಟ ಮಗು ಹಾಡಿದ್ದು. ಬಾಲ್ಯಲೀಲೆಯ ಹೆಸರಲ್ಲಿ ಒಂದು ಕಡೆ ಇರಲಿ ಅಂತ ಇವನನ್ನು ಹಾಡಿಸಿದ್ದು. ಆದರೆ ಈ ‘ಕೊಲವೇರಿ ಡಿ’ ಎಂಬ ಹಾಡು ಯೂಟ್ಯೂಬ್‌ನಲ್ಲಿ ಹಾಕಿದ್ದು ಇಷ್ಟೊಂದು ಜನಪ್ರಿಯ ಆಗುತ್ತೆ ಅಂತ ನಾವ್ಯಾರೂ ಅಂದುಕೊಂಡಿರಲಿಲ್ಲ..” ಎನ್ನುವುದು ಗಾಯಕ ಸೋನು ನಿಗಮ್ ಅಚ್ಚರಿಯ ಉದ್ಘಾರ! ರಜನಿಕಾಂತ್‌ನ ಅಳಿಯ ಧನುಸ್ ಸಿನಿಮಾಕ್ಕಾಗಿ ಹಾಡಿದ ಕೊಲವೇರಿ ಡಿ ಹಾಡು ಈಗ ಛಪ್ಪನ್ನೈವತ್ತಾರು ಬಗೆಗಳಲ್ಲಿ ರಿಮೇಕ್ ಆಗುತ್ತಿದೆ. ಅದರಲ್ಲಿ ಸೋನು ನಿಗಮ್‌ನ ಮಗ ನೆವಾನ್ ಹಾಡಿದ್ದೂ ಒಂದು. ಆದರೆ ಯೂ ಟ್ಯೂಬ್‌ನಲ್ಲಿ ಅದೀಗ ಹಾಟ್ ಹಾಡು!

ಇನ್ನೂ ಮೂರು ವರ್ಷದ ಪೋರ ನೆವಾನ್ ಈಗಲೇ ಹಾಡಲು ಶುರು ಮಾಡುತ್ತಾನೆಯೆ?

“ಛೆ.. ಇಲ್ಲಪ್ಪ. ಅವನಿನ್ನೂ ಚಿಕ್ಕ ಹುಡುಗ. ಹಾಗೆಲ್ಲಾ ಮಕ್ಕಳನ್ನು ಓವರ್‌ಎಕ್ಸ್‌ಪೋಸ್ ಮಾಡಬಾರದು. ಅದು ಒಳ್ಳೆಯದಲ್ಲ” ಎನ್ನುವುದು ಸೋನು ನಿಗಮ್‌ನ ಸ್ಪಷ್ಟನುಡಿ.

ಅಂದ ಹಾಗೆ ಸೋನು ನಿಗಮ್‌ಗೀಗ 38 ವರ್ಷ. ಆತನೂ 3 ವರ್ಷದ ಪೋರನಿದ್ದಾಗ ಅಪ್ಪನ ಜತೆ ಸೇರಿ ವೇದಿಕೆಯಲ್ಲಿ ಮೊಹಮ್ಮದ್ ರಫಿಯ ಹಾಡುಗಳಿಂದಲೇ ಸಂಗೀತ ಜೀವನ ಶುರು ಮಾಡಿದ್ದು. 19ರ ಹರೆಯದಲ್ಲಿ ಬಾಲಿವುಡ್‌ನಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದ ಆತನಿಗೂ ಅಷ್ಟು ಸುಲಭವಾಗಿ ಗಾಯಕನ ಪಟ್ಟ ಲಭಿಸಲಿಲ್ಲ. 97ರಲ್ಲಿ ‘ಬಾರ್ಡರ್’ ಚಿತ್ರಕ್ಕೆ ಆತ ಹಾಡಿದ ‘ಸಂದೇಶೇ ಆತೇ ಹೈ’ ಎಂಬ ಹಾಡು ಸೂಪರ್‌ಹಿಟ್ ಆದ ಬಳಿಕ ಆತನ ಅದೃಷ್ಟ ಖುಲಾಯಿಸಿತು. ವರ್ಷದ ಬಳಿಕ ಸುಭಾಶ್ ಘಾಯ್‌ರ ‘ಪರ್‌ದೇಸ್’ ಚಿತ್ರದಲ್ಲಿ ‘ಯೆ ದಿಲ್.. ದೀವಾನಾ..’ ಎಂಬ ಹಾಡಿನ ಫೋರ್ಸ್ ಸೋನುವನ್ನು ಒಮ್ಮಿಂದೊಮ್ಮೆಲೆ ರಾಕೆಟ್ ವೇಗದಲ್ಲಿ ಮೇಲಕ್ಕೆ ಚಿಮ್ಮಿಸಿತು! ಆ ಬಳಿಕದ್ದೆಲ್ಲ ಇತಿಹಾಸ.

‘2012ರಲ್ಲಿ ಹೇಗೆ?’ ಎಂದು ಕೇಳಿದರೆ, ಸೋನು ನಿಗಮ್ ಬಳಿ ಸಾಕಷ್ಟು ಯೋಜನೆಗಳಿವೆ. ‘ಸದ್ಯಕ್ಕೆ ಒಂದು ಇಂಗ್ಲಿಷ್ ಆಲ್ಬಂ – ಸ್ಪಿರಿಟ್ ಅನ್‌ಫೋಲ್ಡಿಂಗ್’ ಕೆಲಸ ನಡೆದಿದೆ. ಏನಿದ್ದರೂ ಹೊಸ ವರ್ಷದಲ್ಲಿ ಸ್ವಂತ ಕಾರು ಡ್ರೈವ್ ಮಾಡಿಕೊಂಡು ಒಂದು ಸುದೀರ್ಘ ರೋಡ್‌ಟ್ರಿಪ್ ಕೈಗೊಳ್ಳಬೇಕು. ಅದು ಹಿಮಾಲಯದ ಕಡೆಗೂ ಇರಬಹುದು, ಅಥವಾ ಈಶಾನ್ಯ ರಾಜ್ಯಗಳ ಕಡೆಗೂ ಆಗಬಹುದು’ ಎನ್ನುವುದು ಸೋನು ನಿಗಮ್‌ನ ಉತ್ಸಾಹದ ಉತ್ತರ!

■ ಬಿಂದು

